## ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ

ಸಿ.ಸಿ. ನಂಬರಃ 1467/2010 / **ಸಿಡಬ್ಲೂಃ 3 ಪಿಡಬ್ಲೂಃ 2**

ಸಾಕ್ಷಿದಾರರ ಹೆಸರುಃ ಅಯೂಬಖಾನ ಗುಡುಸಾಬ ಮದಭಾವಿ

ವಯಸ್ಸುಃ 46 ವರ್ಷ
ಉದ್ಯೋಗಃ ಶೇತ್ಕಿ
ಸಾಕೀನಃ ಧವಳೇಶ್ವರ

ದಿಃ **20-11-2019** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ಸುಮಾರು 4-5 ವರ್ಷಗಳ ಹಿಂದೆ ಗೋಕಾಕ ಶಹರ ಠಾಣಾ ಪೊಲೀಸರು 3 ದಾಖಲೆಗೆ ಹೆಬ್ಬಟ್ಟಿನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳು ಸಾಕ್ಷಿದಾರರ ಮತ್ತು ಆರೋಪಿತರ ಹೆಬ್ಬಟ್ಟಿನ ಗುರುತುಗಳನ್ನು ಪಡೆದ ಹಾಗೂ ದಸ್ತಾವೇಜನ್ನು ಪಡೆದ ಪಂಚನಾಮೆಗಳಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ರಿಂದ 3 ಪಂಚನಾಮೆಗಳಾಗಿದ್ದು ಅವುಗಳನ್ನು ಈಗಾಗಲೇ ನಿಪಿ-1 ರಿಂದ 3 ಅಂತಾ ಗುರುತಿಸಲಾಗಿದ್ದು ಹಾಗೂ ನಿಪಿ-1 ರಿಂದ 3 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ಹೆಬ್ಬಟ್ಟಿನ ಗುರುತು ಪಡೆದಿರುವುದಿಲ್ಲ. ಹಾಗೂ ದಸ್ತಾವೇಜನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಚಾಸಾ 1, 4 ಮತ್ತು ಆರೋಪಿತರನ್ನು ನೋಡಿರುವುದಿಲ್ಲ ಹಾಗೂ ನಿಪಿ-4 ರಿಂದ ನಿಪಿ-27 ರಲ್ಲಿ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಸ.ಸ.ಅ ರವರಿಂದ ;

ದಿಃ 21-01-2010 ರಂದು ಗೋಕಾಕ ಶಹರ ಠಾಣಾ ಪೊಲೀಸರು ಉಪನೋಂದಣಾಧಿಕಾರಿ ಕೊಟ್ಟಿರುವ ದಸ್ತಾವೇಜ ಸಂಖ್ಯೆ 1243 ರನ್ನು ನನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡು ಹಾಗೂ ಆರೋಪಿತರ ಸಹಿಗಳನ್ನು ಗುರುತಿಸಿ ಪಂಚನಾಮೆಯನ್ನು 10.30 ಗಂಟೆಯಿಂದ 11.00 ಗಂಟೆ ವರೆಗೆ ಜರುಗಿಸಿ ನಿಪಿ-1 ರ ಮೇಲೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ಅದೇ ದಿವಸ ಚಾಸಾ 1 ಮತ್ತು 4 ಇವರ ಒಪ್ಪಿತ ಎಡೆಗೈ ಹೆಬ್ಬಟ್ಟಿನ ಗುರುತುಗಳನ್ನು 12 ಫಾರಂಗಳಲ್ಲಿ ಪಡೆದು ಅವುಗಳನ್ನು ಜಪ್ತಿ ಪಡಿಸಿಕೊಂಡು ಪಂಚನಾಮೆಯನ್ನು 11.15 ರಿಂದ 12.15 ರ ವರೆಗೆ ಜರುಗಿಸಿ ನಿಪಿ-2 ರ ಮೇಲೆ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ಅದೇ ದಿವಸ ಆರೋಪಿತರಾದ ಅಮೀನಾಬಿ ಮತ್ತು ಆಶಾ ಬಿ ಇವರ ಹೆಬ್ಬಟ್ಟಿನ ಗುರುತುಗಳನ್ನು 12 ಫಾರಂಗಳಲ್ಲಿ ಪಡೆದು ಜಪ್ತಿ ಪಡಿಸಿಕೊಂಡು ಪಂಚನಾಮೆಯನ್ನು 12.30 ಯಿಂದ 01.30 ವರೆಗೆ ಜರುಗಿಸಿ ನಿಪಿ-3 ರ ಮೇಲೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಸಾಕ್ಷಿದಾರರ ಮತ್ತು ಆರೋಪಿತರ ನಿಪಿ-4 ರಿಂದ 27 ರಲ್ಲಿನ ಹೆಬ್ಬಟ್ಟಿನ ಗುರುಗಳನ್ನು ಪಡೆದಿದ್ದರು ಸಹಿತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮ್ಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ವೀರೇಶ ಕುಮಾರ ಸಿ. ಕೆ.)
ಪ್ರ.ದಿ.&ನ್ಯಾದಂ.,ಗೋಕಾಕ.